ಓ ಎಸ್ : **156/2017** ಪಿ . ಡಬ್ಲ್ಯೂ-**2**

<u>ಸಾಕ್ಷಿಯನ್ನು ದಿಃ **15.11.2021** ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಹೆಚ್ ಎನ್ ಬಿ ಎನ್ ವಕೀಲರಿಂದಃ</u>

ಸುಂದರೇಶ್ ನನಗೆ ಪರಿಚಯಸ್ಥರಲ್ಲ. ರವಿಕುಮಾರ್ ಮತ್ತು ರಾಜು ರವರ ಸದರಿ ಸುಂದರೇಶ್ ಅವರನ್ನು ನನ್ನ ಬಳಿ ಕರೆದುಕೊಂಡು ಬಂದಿರುತ್ತಾರೆ. ಕರೆದುಕೊಂಡು ಬಂದು ವಿಲ್ ಮಾಡಬೇಕೆಂದು ಹೇಳಿರುತ್ತಾರೆ. ಸದರಿ ಸುಂದರೇಶ್ ರವರು ವಿಲ್ ಮಾಡಿದ ಸಂದರ್ಭದಲ್ಲಿ ಬಾಪೂಜಿ ಆಶ್ರಮ, ಗೋಕುಲಂ ನಲ್ಲಿ ವಾಸವಿದ್ದರು ಎಂದು ಹೇಳಿರುತ್ತಾರೆ. ಸದರಿಯವರಿಗೆ ಆರೋಗ್ಯ ಸರಿಯಿಲ್ಲದ ಕಾರಣ ಬಾಪೂಜಿ ಆಶ್ರಮಕ್ಕೆ ಅವರನ್ನು ಸೇರಿಸಿರುತ್ತಾರೆ ಎಂದರೆ ಸರಿ. ಪತ್ರ ಬರಹಗಾರರಾಗಿ ನಾನು 2012 ನೇ ಇಸವಿಯಿಂದ ಮಾಡುತ್ತಿದ್ದೇನೆ. ಪತ್ರ ಬರಹಗಾರರಾಗಿ ಅಲ್ಲದೆ ನೋಂದಣಿ ಕೆಲಸವನ್ನು ಸಹ ಮಾಡುತ್ತೇನೆ. ನಿಪಿ.1 ವಿಲ್ ನ್ನು ಬರೆಯುವ ಸಮಯದಲ್ಲಿ ಅದರಲ್ಲಿನ ಮಾಹಿತಿ ಕಂಪ್ಯೂಟರ್ ನಲ್ಲಿ ಸೇವ್ ಮಾಡಿರುತ್ತೇವೆ.

ದಿನಾಂಕ ನೆನಪಿಲ್ಲ 2014 ನೇ ಇಸವಿಯಲ್ಲಿ ಸುಂದರೇಶ ಖುದ್ದಾಗಿ ನಮ್ಮ ಕಚೇರಿಗೆ ಬಂದಿರುತ್ತಾರೆ. ಸಮಯ ಮತ್ತು ಯಾವ ವಾರ ಬಂದಿರುತ್ತಾರೆ ಎಂದು ಗೊತ್ತಿಲ್ಲ. ಸದರಿಯವರಿಗೆ ಮೂರು ಮಕ್ಕಳಿದ್ದಾರೆ ಅವರೆಲ್ಲರೂ ಸಹ ಬೇರೆ ಕಡೆ ವಾಸವಾಗಿರುತ್ತಾರೆ ಯಾರು ತನ್ನನ್ನು ನೋಡಿಕೊಳ್ಳುತ್ತಿಲ್ಲ ಎಂದು ಹೇಳಿದ್ದರು. ಸದರಿ ಸುಂದರೇಶ ರವರು ಮಾಹಿತಿಯನ್ನು ವಿಲ್ ಬರೆಯಲು ನೀಡಿದ್ದರು. ಸದರಿಯವರು ವೃತ್ತಿಯಲ್ಲಿದ್ದ ಬಗ್ಗೆ ನಾನು ವಿಚಾರಣೆ ಮಾಡಿರುವುದಿಲ್ಲ. ನಿಪಿ.1 ನ್ನು ತಯಾರು ಮಾಡುವ ಸಮಯದಲ್ಲಿ ಸದರಿ ಸುಂದರೇಶ, ರಾಜು ಮತ್ತು ರವಿಕುಮಾರ್ , ನಮ್ಮ ಕಚೇರಿಯ ಟೈಪಿಸ್ಟ್ ಹಾಜರಿದ್ದರು. ನಿಪಿ.1 ರ ದಾಖಲೆ ಬರೆದ ನಂತರ ಅದನ್ನು ಮೈಸೂರಿನ ಸೌತ್ ಕಚೇರಿಯಲ್ಲಿ ನೋಂದಣಿ ಮಾಡಿರುತ್ತೇವೆ. ನೋಂದಣಿ

ಮಾಡುವ ಸಮಯದಲ್ಲಿ ರಾಜು ಮತ್ತು ರವಿಕುಮಾರ್, ಸುಂದರೇಶ ರವರು ಹಾಜರಿದ್ದರು. ಸದರಿ ಸುಂದರೇಶ ರವರ ಆರೋಗ್ಯ ಸರಿಯಿಲ್ಲದ ಕಾರಣ ಅವರಿಂದ ಓಡಾಡಲು ಅಗುವುದಿಲ್ಲ ಎಂದರೆ ಸರಿಯಲ್ಲ. ಯಾವ ವಾಹನದಲ್ಲಿ ನಮ್ಮ ಕಚೇರಿಗೆ ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ನಿಪಿ.1 ದಾಖಲೆಗೆ ರವಿಕುಮಾರ್ ಒಬ್ಬ ಸಾಕ್ಷಿದಾರರಾಗಿ ಸಹಿ ಮಾಡಿದ್ದು ಸದರಿಯವರು ನನ್ನ ಹಳೆಯ ಕಕ್ಷಿದಾರರು. ರಾಜು ರವರು ರವಿಕುಮಾರ್ ರವರ ಸ್ನೇಹಿತರು. ವಾದಿ ದರ್ಶನ್ ರವರು ವಿಲ್ ಬಗ್ಗೆ ಮಾಹಿತಿ ನೀಡಿದ ಸಂದರ್ಭದಲ್ಲಿ ವಾದಿಯನ್ನು ಕರೆಸಿರುತ್ತಾರೆ ಆಗ ವಾದಿಯ ಪರಿಚಯ ಆಯಿತು. ವಾದಿ ಮತ್ತು ನಿಪಿ.1 ರ ದಾಖಲೆ ಸಾಕ್ಷಿದಾರರುಗಳು ಎಲ್ಲರೂ ಸ್ನೇಹಿತರು ಆಗಿದ್ದರಿಂದ ಎಲ್ಲರೂ ಸೇರಿ ನಿಪಿ.1 ನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ.1 ದಾಖಲೆಯಲ್ಲಿ ನಾನು ನನ್ನ ಸೀಲ್ ಹಾಕಿರುವುದಿಲ್ಲ ಕೈಯಲ್ಲಿ ಬರೆದಿರುತ್ತೇನೆ. ವಾದಿ ನನ್ನ ಸ್ನೇಹಿತ ಎಂಬ ಕಾರಣಕ್ಕಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಹೇಳಿದ ಸಾಕ್ಷವನ್ನು ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿದ ನಂತರ, ಓದಿ ಹೇಳಿದ ಮೇರೆಗೆ ಸಾಕ್ಷಿ ಸರಿ ಇದೆ ಎಂದು ಒಪ್ಪಿತಮ್ಮ ಸಹಿ ಮಾಡಿರುತ್ತಾರೆ.)**

ಓ ಹೇ ಕೇ ಸ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು
ಜೆ.ಎಂ.ಎಫ್.ಸಿ. ತಿ.ನರಸೀಪುರ